ಆರ್‌ಬಿಐ.೨೦೦೬–೨೦೦೭/೩೧೮
ಆರ್.ಪಿ.ಸಿ.ಡಿ. ಸಿ.ಒ.ಆರ್.ಎಫ್.ಬಿಸಿ. ಸಂಖ್ಯೆ ೭೦/೦೭.೩೮.೦೧/೨೦೦೬–೦೭

ಏಪ್ರಿಲ್ ೧೨, ೨೦೦೭

ಅಧ್ಯಕ್ಷರು/ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು,
ಎಲ್ಲಾ ರಾಜ್ಯ ಹಾಗೂ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು

ಮಾನ್ಯರೇ
ಏಕ– ಠೇವಣಿದಾರ ಖಾತೆಗಳಲ್ಲಿ ನಾಮ–ನಿರ್ದೇಶನ ಸೌಲಭ್ಯ

ಮೇಲ್ಕಾಣಿಸಿದ ವಿಷಯದ ಬಗ್ಗೆ ನಮ್ಮ ಸುತ್ತೋಲೆ ಆರ್.ಪಿ.ಸಿ.ಡಿ. ಸಿ.ಒ.ಆರ್.ಎಫ್.ಬಿಸಿ. ಸಂಖ್ಯೆ ೧೨/೦೭.೩೮.೦೧/೨೦೦೫–೦೬ ದಿನಾಂಕ ಜುಲೈ ೧೨, ೨೦೦೫ರ ಪ್ಯಾರ ೯ನ್ನು ದಯವಿಟ್ಟು ಗಮನಿಸಿ. ಠೇವಣಿಖಾತೆದಾರರಿಗೆ ಲಭ್ಯವಿರುವ ಉತ್ತರಜೀವಿತಾಧಿಕಾರದ ಖಂಡ [Clause] ಹಾಗೂ ನಾಮ–ನಿರ್ದೇಶನ ಸೌಲಭ್ಯಗಳ ಬಗ್ಗೆ ವ್ಯಾಪಕ ಪ್ರಚಾರ ಮತ್ತು ಸೂಕ್ತ ಮಾರ್ಗದರ್ಶನ ನೀಡಲು ಬ್ಯಾಂಕುಗಳಿಗೆ ಆದೇಶಿಸಲಾಗಿತ್ತು. ಈ ದಿಸೆಯಲ್ಲಿನ ಉತ್ತಮ ಪ್ರಯತ್ನಗಳ ಹೊರತಾಗಿಯೂ, ಬ್ಯಾಂಕುಗಳು ನಾಮ–ನಿರ್ದೇಶನವಿಲ್ಲದ ಏಕ– ಠೇವಣಿದಾರ ಖಾತೆಗಳನ್ನು ತೆರೆಯಬಹುದೆಂದು ನಮಗೆ ಅನಿಸುತ್ತದೆ.

೨. ಅಲಹಾಬಾದ್ ಹೈಕೋರ್ಟ್ ನ ಮುಂದೆ ಬಂದ ಒಂದು ಪ್ರಕರಣದಲ್ಲಿ ಘನತೆವೆತ್ತ ನ್ಯಾಯಾಲಯ ಹೀಗೆ ಅಭಿಪ್ರಾಯ ಪಟ್ಟಿದೆ: ``ಠೇವಣಿದಾರರು ನಾಮ–ನಿರ್ದೇಶನಗೊಂಡವರ ಹೆಸರನ್ನು ನೀಡದಿದ್ದಲ್ಲಿ ಉಳಿತಾಯ ಖಾತೆಯಲ್ಲಾಗಲೀ, ನಿಶ್ಚಿತ ಠೇವಣಿಯ ಖಾತೆಯಲ್ಲಾಗಲೀ ಅಂತಹ ಏಕ– ಠೇವಣಿದಾರ ಖಾತೆಯನ್ನು ತೆರೆಯಬಾರದೆಂಬ ಮಾರ್ಗಸೂಚಿಗಳನ್ನು ರಿಸರ್ವ್ ಬ್ಯಾಂಕ್ ನೀಡುವುದು ಅತ್ಯಂತ ಉಚಿತವಾಗಿರುತ್ತದೆ. ಕಾನೂನು ಸಮ್ಮತವಾಗಿ ಸೇರಬೇಕಾದ ಹಣವನ್ನು ಪಡೆಯಲು ನ್ಯಾಯಾಲಯದ ಪ್ರಕ್ರಿಯೆಯಲ್ಲಿ ಉಂಟಾಗಬಹುದಾದ ದೀರ್ಘ ಕಾಲದ ವಿಳಂಬದ ಅನಾನುಕೂಲತೆಯನ್ನು ನಿವಾರಿಸಿ ಅಮಾಯಕ ವಿಧವೆಯರಿಗೆ ಹಾಗೂ ಮಕ್ಕಳಿಗೆ ಸೂಕ್ತ ನ್ಯಾಯ ದೊರಕಿಸಿಕೊಡುವಲ್ಲಿ ಈ ಮಾರ್ಗದರ್ಶನಗಳು ಮುಖ್ಯ ಪಾತ್ರ ವಹಿಸುತ್ತವೆ.

೩. ಇದನ್ನು ಗಮನದಲ್ಲಿರಿಸಿಕೊಂಡು ಠೇವಣಿ ಖಾತೆಯನ್ನು ತೆರೆಯುವ ವ್ಯಕ್ತಿಯು ಸಾಮಾನ್ಯವಾಗಿ ನಾಮ–ನಿರ್ದೇಶನ ಮೊದಲೇಬೇಕೆಂದು ಒತ್ತಾಯಿಸಲು ಬ್ಯಾಂಕುಗಳಿಗೆ ಆದೇಶಿಸಲಾಗಿದೆ. ಒಂದು ವೇಳೆ ಖಾತೆ ತೆರೆಯುವ ವ್ಯಕ್ತಿಯು ನಾಮ–ನಿರ್ದೇಶನವನ್ನು ಮಾಡದಿದ್ದಲ್ಲಿ ಬ್ಯಾಂಕು ನಾಮ–ನಿರ್ದೇಶನ ಸೌಲಭ್ಯದ ಅನುಕೂಲತೆಗಳನ್ನು ವಿವರಿಸಬೇಕು. ಇಷ್ಟಾಗಿಯೂ ಖಾತೆ ತೆರೆಯುವ ವ್ಯಕ್ತಿ ನಾಮ–ನಿರ್ದೇಶನ ಮಾಡಲು ಇಚ್ಛಿಸದಿದ್ದಲ್ಲಿ, ಬ್ಯಾಂಕು ಅಂತಹ ವ್ಯಕ್ತಿಯಿಂದ ತಾನು ನಾಮ–ನಿರ್ದೇಶನ ಮಾಡಲು ಇಚ್ಛಿಸುವುದಿಲ್ಲವೆಂಬುದರ ಬಗ್ಗೆ ನಿರ್ದಿಷ್ಟ ಪತ್ರ ಪಡೆಯತಕ್ಕದ್ದು. ಒಂದು ವೇಳೆ ಖಾತೆ ತೆರೆಯುವ ವ್ಯಕ್ತಿ ಅಂತಹ ಪತ್ರ ನೀಡಲು ನಿರಾಕರಿಸಿದಲ್ಲಿ ಬ್ಯಾಂಕು ಈ ವಿಷಯವನ್ನು ಖಾತೆ ತೆರೆಯುವ ನಮೂನೆಯ ಮೇಲೆ ದಾಖಲಿಸಿ, ಮಿಕ್ಕ ವಿವರಗಳು ಅರ್ಹವಾಗಿದ್ದಲ್ಲಿ ಖಾತೆ ತೆರೆಯುವ ಪ್ರಕ್ರಿಯೆಯನ್ನು ಮುಂದುವರಿಸಬಹುದು.

ಯಾವುದೇ ಸಂದರ್ಭದಲ್ಲಿ ಖಾತೆ ತೆರೆಯುವ ವ್ಯಕ್ತಿಯು ನಾಮನಿರ್ದೇಶನ ಮಾಡಲು ನಿರಾಕರಿಸಿದನೆಂಬ ಒಂದೇ ಕಾರಣಕ್ಕಾಗಿ ಬ್ಯಾಂಕು ಖಾತೆ ತೆರೆಯಲು ನಿರಾಕರಿಸಕೂಡದು.

೪. ಏಕ ವ್ಯಕ್ತಿ ಮಾಲೀಕತ್ವದ ಹೆಸರಿನಲ್ಲಿ ಠೇವಣಿ ಖಾತೆಗಳಿಗೆ ಸಂಬಂಧಿಸಿದಂತೆ ಮೇಲೆ ಸೂಚಿಸಿರುವ ಕ್ರಮಗಳನ್ನು ಪಾಲಿಸುವಂತೆ ಬ್ಯಾಂಕುಗಳಿಗೂ ಸಹ ಸೂಚಿಸಲಾಗಿದೆ.

೫. ಸಂಬಂಧಿಸಿದ ನಮ್ಮ ಪ್ರಾದೇಶಿಕ ಕಚೇರಿಗಳಿಗೆ ಸ್ವೀಕೃತಿ ನೀಡಲು ಕೋರಲಾಗಿದೆ.

ತಮ್ಮ ವಿಶ್ವಾಸಿ

(ಸಿ.ಎಸ್. ಮೂರ್ತಿ)
ಪ್ರಭಾರಿ ಮುಖ್ಯ ಮಹಾ ವ್ಯವಸ್ಥಾಪಕರು